## ಕವಿ ಮನಸು

### ದಿವ್ಯ ಸಿಂಧು

ರವಿ ಬರುವ ಆಪ್ತನಾಗಿ
ನಿತ್ಯ ಧರೆಯ ನೋಡಲು!!
ಜೀವಕುಲವ ಸೋಕುತಲಿ
ತನುವಿಗೆ ಶಕ್ತಿ ನೀಡಲು!!

ಬೆಳಕು ಕತ್ತಲಾಟ ಬಾಳು
ಆಡು ನೀನು ನಿಲ್ಲದಂತೆ!!
ಕಷ್ಟನುಂಗಿ ಪಡೆವ ಯಶ"
ಸವಿಜೇನ, ಬೆಲ್ಲದಂತೆ;!!

ಕೋಟಿ ಜೀವರಾಶಿ ಇಲ್ಲಿ
ಅನುಕ್ಷಣ ಉಸಿರ ಪಾಠ!!
ಸೃಷ್ಟಿ ಲಯದ ಸರತಿಯಲ್ಲಿ
ಎಲ್ಲಾ ಬಲ್ಲದೇವರ ಆಟ!!!

ಸತ್ಯಪ್ರೀತಿ, ಧರ್ಮವೊಂದೇ
ನಿನ್ನ ಕಾಯ್ವ ದೀನ ಬಂಧು!!
ಮನುಕುಲದಿ ಮಾಸದಿರಲಿ
ಮನುಷತ್ವದ ದಿವ್ಯಸಿಂಧು!!!


– ಶಿವರಾಜ್.ವಿ
ಹೊಸಪೇಟೆ, ವಿಜಯನಗರ


ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಚಾನಲ್
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

Digital
PHOTOGRAPHY SERVICE
" CAPTURE YOUR PERFECT MOMENT "
WEDDING SHOOTING
FASHION SHOOTING
EVENT COVERAGE
BOOK NOW
9632121359


## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ: 02–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.29 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 361 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.663 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |


ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.87 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8056 ಕ್ಯುಸೆಕ್ |
| ಸಾಮರ್ಥ್ಯ | 50.508 ಟಿಎಂಸಿ |


ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


# ಕೇಂದ್ರ ಬಜೆಟ್ ರಾಜ್ಯಕ್ಕೆ ಅನ್ಯಾಯ

## ಫೆಬ್ರವರಿ 7 ರಂದು ನವದೆಹಲಿಯಲ್ಲಿ ಪ್ರತಿಭಟನೆ : ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಹೊಸಪೇಟೆ:**
ಕೇಂದ್ರ ಬಜೆಟ್ ನಲ್ಲಿ ರಾಜ್ಯಕ್ಕೆ ಎಸಗಿರುವ ಅನ್ಯಾಯವನ್ನು ವಿರೋಧಿಸಿ ಫೆಬ್ರವರಿ 7 ರಂದು ನವದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಹಂಪಿ ವಿಶ್ವವಿದ್ಯಾಲಯ ಆವರಣದ ಹೆಲಿಪ್ಯಾಡ್ ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು ರಾಜ್ಯಕ್ಕೆ ಕೇಂದ್ರ ಬಜೆಟ್ ನಿಂದ ಅನ್ಯಾಯವಾಗಿರುವ ಕಾರಣಕ್ಕೆ ನವದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಕಾಂಗ್ರೆಸ್ ಪ್ರತಿಭಟನೆ ನಡೆಸಲು ಉದ್ದೇಶಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ,. ಕೇಂದ್ರ ಸರ್ಕಾರದ ಬಜೆಟ್ ನಲ್ಲಿ ಕರ್ನಾಟಕಕ್ಕೆ ಏನನ್ನೂ ನೀಡದೇ ರಾಜ್ಯಕ್ಕೆ ಅನ್ಯಾಯವನ್ನು ಎಸೆಗಲಾಗಿದೆ. ರಾಜ್ಯಕ್ಕೆ ಬರಗಾಲದ ಪರಿಹಾರವಾಗಿ ಎನ್ ಡಿಆರ್ ಎಫ್ ನಿಂದ 4663 ಕೋಟಿ ರೂ. ಮೊತ್ತವನ್ನು ನೀಡಲು ಕೇಂದ್ರಕ್ಕೆ ಮನವಿ ಸಲ್ಲಿಸಿ ನಾಲ್ಕು ತಿಂಗಳೂ ಕಳೆದಿದ್ದರೂ , ಕೇಂದ್ರದಿಂದ ಯಾವ ಸ್ಪಂದನೆಯೂ ದೊರೆತಿಲ್ಲ. ಈ ಎಲ್ಲ ಕಾರಣಗಳಿಗಾಗಿ ಅನಿವಾರ್ಯವಾಗಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದ್ದು, ತಾನೂ ಪ್ರತಿಭಟನೆಯಲ್ಲಿ ಭಾಗವಹಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

**ದೇಶ ಅಖಂಡವಾಗಿರಬೇಕು:** ಸಂಸದ ಡಿ.ಕೆ.ಸುರೇಶ್ ಅವರ ದೇಶವನ್ನು ಇಬ್ಭಾಗವಾಗಿಸುವ ಹೇಳಿಕೆ ಕೇಂದ್ರ ಅಧಿವೇಶನದಲ್ಲಿ ಚರ್ಚೆಯಾಗಿರುವ ಬಗ್ಗೆ ಬಿಜೆಪಿಯವರು ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ದೇಶವನ್ನು ಇಬ್ಭಾಗವಾಗಿಸುವ ಉದ್ದೇಶದಿಂದ ಸಂಸದ ಡಿ.ಕೆ.ಸುರೇಶ್ ಅವರು ಆ ಹೇಳಿಕೆಯನ್ನು ನೀಡಿರುವುದಿಲ್ಲ. ದೇಶ ಅಖಂಡವಾಗಿರಬೇಕೆಂಬುದು ನಾವು ಬಯಸುತ್ತೇವೆ. ಬಿಜೆಪಿಯವರು ಕೇಂದ್ರ ಬಜೆಟ್ ನಲ್ಲಿ ಬಡವರು, ರೈತರು, ನಿರುದ್ಯೋಗ ವಿಷಯಗಳ ಬಗ್ಗೆ ಚರ್ಚೆ ಮಾಡಿ, ಪರಿಹಾರ ನೀಡುವ ಬದಲು ಇಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾರೆ ಎಂದರು.

ಕೇಂದ್ರ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿದ್ದರೂ, ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ. 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ 5495 ಕೋಟಿ ರೂ. ಹಾಗೂ ಇಲ್ಲಿನ ಫೆರಿಫೆರಲ್ ರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಪ್ರಮುಖ ಯೋಜನೆಗಳಿಗೆ 6000 ಕೋಟಿ ರೂ. ಒದಗಿಸುವ ಸಾಧ್ಯತೆ ಇತ್ತು. ಆದರೆ ಯಾವುದೇ ಅನುದಾನವನ್ನು ನೀಡಿಲ್ಲ ಎಂದು ತಿಳಿಸಿದರು.

**ಜನರಿಗಾಗಿ ಸಾಂಸ್ಕೃತಿಕ ಉತ್ಸವ:** ಇಂದಿನಿಂದ ಮೂರು ದಿನಗಳ ಕಾಲ ಹಂಪ ಉತ್ಸವ ನಡೆಯಲಿದೆ. ಜನರಿಗಾಗಿ ಹಾಗೂ ಕಲಾವಿದರಿಗಾಗಿ ಉತ್ಸವಗಳನ್ನು ಆಚರಿಸಲಾಗುತ್ತದೆ. ಬರಗಾಲ ವಿದ್ದರೂ ಉತ್ಸವಗಳನ್ನು ಮಾಡದೇ ಇರಲು ಸಾಧ್ಯವಿಲ್ಲ. ಇದೊಂದು ಸಾಂಸ್ಕೃತಿಕ ಉತ್ಸವ ಎಂದು ತಿಳಿಸಿದರು.

# ಗಮನ ಸೆಳೆದ ಸಾವಯವ ಸಿರಿಧಾನ್ಯಗಳ ವಸ್ತು ಪ್ರದರ್ಶನ



**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವದ ಅಂಗವಾಗಿ ಮಾತಂಗ ಪರ್ವತ ಮೈದಾನದಲ್ಲಿ ಕೃಷಿ ಇಲಾಖೆಯಿಂದ ಏರ್ಪಡಿಸಲಾದ ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನವು ಸಾರ್ವಜನಿಕರ ಗಮನ ಸೆಳೆಯಿತು.

ಈ ಕಾರ್ಯಕ್ರಮಗಳಿಗೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್‌ಅಹ್ಮದ್‌ಖಾನ್‌ಅವರು ಶುಕ್ರವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ವಿಜಯನಗರ ಶಾಸಕರಾದ ಹೆಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್., ತೋಟಗಾರಿಕೆ ಇಲಾಖೆ ಉಪನಿರ್ದೇಶಕರು ಸೇರಿದಂತೆಜನಪ್ರತಿನಿಧಿಗಳು, ಹಲವು ಗಣ್ಯರು, ರೈತರು, ಸಾರ್ವಜನಿಕರು ಉಪಸ್ಥಿತರಿದ್ದರು.

ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನದಲ್ಲಿ ಪ್ರಮುಖವಾಗಿಅತ್ಯುತ್ತಮ ಮಳೆ ನೀರುಕೊಯ್ಲು ಮಾಡಿ ಹಿಂದಿನ ಜನರು, ಜಾನುವಾರುಗಳಿಗೆ ಹಾಗೂ ಕೃಷಿಗೆ ಯಾವರೀತಿಯಲ್ಲಿ ನೀರನ್ನು ಬಳಸುತ್ತಿದ್ದರು, ಪ್ರಸ್ತುತ ಮಳೆ ನೀರುಕೊಯ್ಲು ಮಾಡುವುದುಜಿಲ್ಲೆಯ ಕೃಷಿಗೆ ಅವಶ್ಯಕವಾಗಿದೆ.ಈ ಹಿನ್ನೆಲೆಯಲ್ಲಿ ಜಲ ಸಂರಕ್ಷಣೆ, ಮಣ್ಣಿನ ಸಂರಕ್ಷಣೆ ಮತ್ತು ಜಮೀನುಗಳಲ್ಲಿ ನೀರಿನ ಹೊಂಡ ನಿರ್ಮಾಣ ಹಾಗೂ ಮಿಶ್ರ ಬೇಸಾಯದಜೊತೆಗೆ ಸಮಗ್ರ ಹಾಗೂ ಸುಸ್ಥಿರ ಕೃಷಿ ಮಾದರಿಗಳನ್ನು ಪ್ರದರ್ಶಿಸುವ ಜೊತೆಗೆರೈತರಿಗೆ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಮುಖ್ಯವಾಗಿ ಸಿರಿ ಧಾನ್ಯಗಳಿಂದ ನಿರ್ಮಿಸಿದ ಕನ್ನಡಾಂಬೆ ಭುವನೇಶ್ವರಿತಾಯಿ ಹಾಗೂ ವಿಶ್ವಗುರು ಬಸವಣ್ಣಅವರ ಕಲಾಕೃತಿಗಳು ಸೇರಿದಂತೆ ವಿವಿಧ ಕಲಾಕೃತಿಗಳು ಸಾರ್ವಜನಿಕರಿಗೆ ಕೈಬೀಸಿ ಕರೆಯುವಂತಿವೆ. ಇದೆ ವೇಳೆ ಸಿರಿಧಾನ್ಯಗಳ ಪಾಕ ಸ್ಪರ್ಧೆಗೂ ಚಾಲನೆ ದೊರೆಯಿತು.



# ಹಂಪಿ ಉತ್ಸವ - 2024

# ಫೆ.3 ಸಾಂಸ್ಕೃತಿಕ ಕಾರ್ಯಕ್ರಮಗಳು

**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವ–2024ರ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಫೆ. 3ರಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಂಪಿಯ ನಾಲ್ಕು ಪ್ರಮುಖ ವೇದಿಗೆಗಳಲ್ಲಿ ಹಮ್ಮಿಕೊಳ್ಳಲಾಗಿದೆ.

## ಗಾಯಿತ್ರಿ ಪೀಠದಲ್ಲಿ (ಮುಖ್ಯ ವೇದಿಕೆ)

ಫೆ.3ರಂದು ಸಂಜೆ 5.30 ರಿಂದ 6 ರವರೆಗೆ ಹೊಸಪೇಟೆಯ ಕೆ.ಎಸ್ ಸತ್ಯನಾರಾಯಣ ಮತ್ತು ತಂಡದವರಿಂದ ರಾಮಾಯಣ ಬಯಲಾಟ ಕಾರ್ಯಕ್ರಮ ನೆಡೆಯಲಿದೆ.6 ರಿಂದ 6.30 ರವರೆಗೆ ಬೆಂಗಳೂರಿನ ನೃತ್ಯ ಚೂಡಮಣಿ ವೈಜಯಂತಿ ಕಾಶಿ ಮತ್ತು ತಂಡದವರಿಂದ ನೃತ್ಯ ರೂಪಕ, 6.30 ರಿಂದ 6.45 ರವರೆಗೆ ಬೆಂಗಳೂರಿನ ನೃತ್ಯ ತಂಡದವರಿಂದ ಹಂಪಿ ಉತ್ಸವ ಗೀತೆಗೆ ನೃತ್ಯ, 6.45 ರಿಂದ 7 ರವರೆಗೆ ಕೋಲ್ಕತ್ತದ ಗೋಲ್ಡನ್ ಗರ್ಲ್ಸ್ ತಂಡದವರಿಂದ ಗಣಪತಿ ನೃತ್ಯ, 7 ರಿಂದ 7.30 ರವರೆಗೆ ಹಂಪಿ ಉತ್ಸವದ 2 ನೇ ದಿನದ ಉದ್ಘಾಟನೆ ಕಾರ್ಯಕ್ರಮದ ನಂತರ 7.30 ರಿಂದ 8 ರವರೆಗೆ ಕೋಲ್ಕತ್ತದ ಗೋಲ್ಡನ್ ಗರ್ಲ್ಸ್ ತಂಡದವರಿಂದ ಶಿವನ ನೃತ್ಯ,

8 ರಿಂದ 8.30 ರವರೆಗೆ ಗಂಗಾವತಿಯ ಪ್ರಾಣೇಶ ಮತ್ತು ತಂಡದವರಿಂದ ಹಾಸ್ಯ ಸಂಜೆ, 8.30 ರಿಂದ 8.45 ರವರೆಗೆ ಕೋಲ್ಕತ್ತದ ಗೋಲ್ಡನ್ ಗರ್ಲ್ಸ್ ತಂಡದವರಿಂದ ಭಕ್ತಿ ನೃತ್ಯರೂಪಕ, 8.45 ರಿಂದ 9.30 ರವರೆಗೆ ಬೆಂಗಳೂರಿನ ಆಲ್.ಒಕೆ ತಂಡದವರಿಂದ ಸಂಗೀತ ಕಾರ್ಯಕ್ರಮ, 9.30 ರಿಂದ 9.45 ರವರೆಗೆ ಬೆಂಗಳೂರಿನ ಗಿಚ್ಚಿ ಗಿಲಿಗಿಲಿ ತಂಡದವರಿಂದ ಹಾಸ್ಯ ಸಂಯೋಜನೆ, 9.45 ರಿಂದ 10.15 ರವರೆಗೆ ಬೆಂಗಳೂರಿನ ಖ್ಯಾತ ವಯಲಿನ್ ವಾದಕ ಡಾ. ಜ್ಯೋತ್ಸ್ನ ಶ್ರೀಕಾಂತ್ ಮತ್ತು ತಂಡದವರಿಂದ ತಂತಿ ವಾದ್ಯಗಳ ಗೋಷ್ಠಿ,

10.15 ರಿಂದ 10.30 ರವರೆಗೆ ಬೆಂಗಳೂರಿನ ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್ ಬಾಳೇಶ್ ಭಜಂತ್ರಿಯವರಿಂದ ಶಹನಾಯಿ ವಾದನ ಕಾರ್ಯಕ್ರಮ ಹಾಗೂ ಬೆಂಗಳೂರಿನ ಖ್ಯಾತ ಸಂಗೀತ ಸಂಯೋಜಕ ವಿ.ಹರಿಕೃಷ್ಣ ಮತ್ತು ಗಾಯಕರಾದ ಹೇಮಂತ್, ಸಂತೋಷ, ವೆಂಕಿ, ಅನಿರುದ್ಧ್ ಶೆಟ್ಟಿ, ವಾಣಿ, ಇಂದುನಾಗರಾಜ ಹಾಗೂ ಸ್ಟಾರ್ ಹಾಡುಗಾರರ ತಂಡದವರಿಂದ ರಸಮಂಜರಿ ಕಾರ್ಯಕ್ರಮ ನೆಡೆಯಲಿದೆ.




## ಎದುರು ಬಸವಣ್ಣ ವೇದಿಕೆ

ಫೆ.3ರಂದು ಸಂಜೆ 5 ಗಂಟೆಯಿಂದ 5.15 ರವರೆಗೆ ಕೊಟ್ಟೂರು ಸಂಗಮೇಶ್ವರದ ಎನ್ ವೃಷಬೇಂದ್ರಗೌಡ ಮತ್ತು ತಂಡದವರಿಂದ ವಚನ ಗಾಯನ ಕಾರ್ಯಕ್ರಮ ನೆಡೆಯಲಿದೆ. ನಂತರ 5.15 ರಿಂದ 5.30 ರವರೆಗೆ ಬೆಂಗಳೂರು ಹೆಗ್ಗನಹಳ್ಳಿಯ ಕಡಬ ಶ್ರೀನಿವಾಸ್ ಮತ್ತು ತಂಡದವರಿಂದ ಜಾದೂ ಪ್ರದರ್ಶನ, 5.30 ರಿಂದ 5.45 ರವರೆಗೆ ಹಡಗಲಿ ಹುಗುಲೂರು ದೂಪದ ಕೊಟ್ರಪ್ಪ ಮತ್ತು ತಂಡದವರಿಂದ ಜಾನಪದ ಹಾಡು, 5.45 ರಿಂದ 6 ರವರೆಗೆ ಬೆಂಗಳೂರು ಜಯನಗರದ ಅಕ್ಷತಾ ಮತ್ತು ತಂಡದವರಿಂದ ನೃತ್ಯ, 6 ರಿಂದ 6.15 ರವರೆಗೆ ಯಲಬುರ್ಗಾದ ಮಾರೆಪ್ಪ ದಾಸರ ಮತ್ತು ತಂಡದವರಿಂದ ಜಾನಪದ ಮತ್ತು ತತ್ವಪದ, 6.15 ರಿಂದ 6.30 ರವರೆಗೆ ಬೆಂಗಳೂರು ರಾಜಾಜಿನಗರದ ಕೇಶವ ಕಾಲೇಜ್ ಆಫ್ ಡ್ಯಾನ್ಸ್ ತಂಡದವರಿಂದ ನೃತ್ಯರೂಪಕ, 6.30 ರಿಂದ 6.45 ರವರೆಗೆ ಹೊಸಪೇಟೆಯ ಮಲ್ಲೇಶ್ ಮತ್ತು ವಾಯುಸನ್ ಡ್ಯಾನ್ಸ್ ಸ್ಟುಡಿಯೋ ತಂಡದವರಿಂದ ನೃತ್ಯ, 6.45 ರಿಂದ 7 ರವರೆಗೆ ಬೆಂಗಳೂರಿನ ದಿವ್ಯಾ ಬಸವರಾಜ್ ಮತ್ತು ತಂಡದವರಿಂದ ಗಾಯನ, 7 ರಿಂದ 715 ರವರೆಗೆ ಕೂಡ್ಲಿಗಿ ಮೊರಬನ ಚಲವಾದಿ ವೀರಪ್ಪ ಮತ್ತು ತಂಡದವರಿಂದ ಶಹನಾಯಿ ವಾದನ, 7.15 ರಿಂದ 7.30 ರವರೆಗೆ ಮೈಸೂರು ಜಿಲ್ಲೆಯ ಕೂಗಲೂರಿನ ಶಿವರಾಜ್ ನಾಯಕ್ ಮತ್ತು ತಂಡದವರಿಂದ ಸುಗಮ ಸಂಗೀತ, 7.30 ರಿಂದ 7.45 ರವರೆಗೆ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿಯ ಮೆಘನಾ ಎ.ಸಿ ಮತ್ತು ತಂಡದವರಿಂದ ಶಾಸ್ತ್ರೀಯ ನೃತ್ಯರೂಪಕ, 7.45 ರಿಂದ 8 ರವರೆಗೆ ಮೈಸೂರು ನಂಜನಗೂಡಿನ ಎಂ.ಡಿ ರಾಜೇಂದ್ರ ಪ್ರಾಸದ್ ಮತ್ತು ತಂಡದವರಿಂದ ತತ್ವಪದ, 8 ರಿಂದ 8.15 ರವರೆಗೆ ಸಿರುಗುಪ್ಪ ಬಲಕುಂದಿಯ ಬಿ ಬಸವರಾಜ್ ಮತ್ತು ತಂಡದವರಿಂದ ಕೂಚುಪುಡಿ ನೃತ್ಯ, 8.15 ರಿಂದ 8.30 ರವರೆಗೆ ಗುಂಡ್ಲುಪೇಟೆಯ ಎಸ್ ಪುಟ್ಟರಾಜು ಮತ್ತು ತಂಡದವರಿಂದ ನೀಲಗಾರರ ಪದಗಳು, 8.30 ರಿಂದ 8.45 ರವರೆಗೆ ಬೆಂಗಳೂರು ಕಲಾದರ್ಪಣದ ಹೇಮಾ ವಿನಾಯಕ್ ಪಾಟೀಲ್ ಮತ್ತು ತಂಡದವರಿಂದ ದಾರದೊಂದಿಗೆ ಚಿತ್ರ ಬರೆಯುವ ಕಾರ್ಯಕ್ರಮ, 8.45 ರಿಂದ 9 ರವರೆಗೆ ಹಗರಿಬೊಮ್ಮನಹಳ್ಳಿಯ ಸಿಂಧು ಕೆ ಮತ್ತು ತಂಡದವರಿಂದ ಭರತನಾಟ್ಯ, 9 ರಿಂದ 9.15 ರವರೆಗೆ ಬೆಂಗಳೂರು ಮಲ್ಲೇಶ್ವರಂನ ಸ್ನೇಹಲತಾ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, 9.15 ರಿಂದ 9.30 ರವರೆಗೆ ಬಾಗಲಕೊಟೆ ಮುದೋಳ್‌ನ ಎಚ್.ಕೃಷ್ಣಪ್ಪ ರವರಿಂದ ಸುಗಮ ಸಂಗೀತ, 9.30 ರಿಂದ 9.45 ರವರೆಗೆ ಹಾಸನ, ಬೆಲೂರಿನ ಶಿವಣ್ಣ ಎಸ್ ರಾಜಗಿರಿ ಮತ್ತು ತಂಡದವರಿಂದ ಜಾನಪದ ಸಂಗೀತ, 9.45 ರಿಂದ 10 ರವರೆಗೆ ಮೈಸೂರಿನ ಹೇಮಂತ್ ಕುಮಾರಿ ಸಿ ಮತ್ತು ತಂಡದವರಿಂದ ಬೀಸು ಕಂಸಾಳೆ,

10 ರಿಂದ 10.15 ರವರೆಗೆ ಬೆಂಗಳೂರಿನ ಕುಮಾರಿ ಪ್ಲಥ್ವಿ ಮತ್ತು ತಂಡದವರಿಂದ ಸಮೂಹನೃತ್ಯ, 10.15 ರಿಂದ 10.30 ರವರೆಗೆ ಕೊಪ್ಪಳ ಬಹದ್ದೂರ್ ಬಂಡಿಯ ಮೆಹಬೂಬ್ ಕಿಲ್ಲೆದರ್ ಮತ್ತು ತಂಡದವರಿಂದ ಜಾನಪದ ಗಾಯನ, 10.30 ರಿಂದ 10.45 ರವರೆಗೆ ಚಿದಂಬರ ನಟೇಶ ನಾಟ್ಯ ಶಾಲೆ ಮೈಸೂರಿನ ಸಮೂಹ ನೃತ್ಯ ಹಾಗೂ 10.45 ರಿಂದ 11 ರವರೆಗೆ ಹೊಸಪೇಟೆ ಮರಿಯಮ್ಮನಹಳ್ಳಿಯ ಎ ದಾದಪೀರ್ ಮತ್ತು ತಂಡದವರಿಂದ ಜಾನಪದ ಗಾಯನ ನೆಡೆಯಲಿದೆ.

## ವಿರುಪಾಕ್ಷೇಶ್ವರ ದೇವಸ್ಥಾನ ವೇದಿಕೆ

ಸಂಜೆ 5 ರಿಂದ 5.15 ರವರೆಗೆ ಹೊಸಪೇಟೆ ಚಿತ್ರವಾಡ್ಗಿಯ ಸದ್ಗುರು ಯಮುನಪ್ಪ ತಾತನವರ ಮಠದಿಂದ ದಾಸವಾಣಿ ಕಾರ್ಯಕ್ರಮ ನೆಡೆಯಲಿದೆ. 5.15 ರಿಂದ 5.30 ರವರೆಗೆ ಹೊಸಪೇಟೆಯ ಎಸ್ ಮಂಜುಳಾ ಮತ್ತು ತಂಡದವರಿಂದ ಸುಗಮ ಸಂಗೀತ, 5.30 ರಿಂದ 5.45 ರವರೆಗೆ ಹೊಸಪೇಟೆ ತಾಳೇ ಬಸಾಪುರ ತಾಂಡದ ಎಸ್ ಜಗದೀಶ್ ನಾಯ್ಕ ರವರಿಂದ ಶಾಸ್ತ್ರೀಯ ಸಂಗೀತ 5.45 ರಿಂದ 6 ರವರೆಗೆ ಹರಪನಹಳ್ಳಿ ಬಿ ಸಿದ್ದನಗೌಡ ಮೈದೂರು ಮತ್ತು ತಂಡದವರಿಂದ ಸುಗಮ ಸಂಗೀತ, 6 ರಿಂದ 6.15 ರವರೆಗೆ ಕಂಪ್ಲಿಯ ಡಿ ಅಶ್ವಿನಿ ಮತ್ತು ತಂಡದವರಿಂದ ಭರತನಾಟ್ಯ, 6.15 ರಿಂದ 6.30 ರವರೆಗೆ ಸಿರುಗುಪ್ಪದ ದೊಡ್ಡ ಹುಸೇನಪ್ಪ ಅರಳಿಗನೂರು ಮತ್ತು ತಂಡದವರಿಂದ ಹಿಂದೂಸ್ಥಾನಿ ಸಂಗೀತ, 6.30 ರಿಂದ 6.45 ರವರೆಗೆ ಬೆಂಗಳೂರು ರಾಜಾಜಿನಗರದ ಕುಮಾರ್ ಪೃಥ್ವಿರಾಜ್ ಕುಲಕರ್ಣಿ ಅವರಿಂದ ಕೊಳಲುವಾದನ, 6.45 ರಿಂದ 7 ರವರೆಗೆ ಚಿತ್ರದುರ್ಗ ಸಿದ್ದಯ್ಯನಕೊಟೆಯ ಶಿವಯೋಗಿ ಸಿದ್ದರಾಮೇಶ್ವರ ಗ್ರಾಮೀಣ ಸಾಂಸ್ಕೃತಿಕ ಕಲಾಸಂಘದಿಂದ ಸುಗಮ ಸಂಗೀತ, 7 ರಿಂದ 7.15 ರವರೆಗೆ ಬಳ್ಳಾರಿಯ ಎಚ್. ಶ್ರೀಹರ್ಷಿತ ಮತ್ತು ತಂಡದವರಿಂದ ಕುಚುಪುಡಿ ನೃತ್ಯ, 7.15 ರಿಂದ 7.30 ರವರೆಗೆ ಕೊಟ್ಟೂರಿನ ಹರಿಜನ ನೀಲಪ್ಪ ಅಲಬೂರು ಮತ್ತು ತಂಡದವರಿಂದ ಶಿಶುನಾಳ ಶರೀಫರ ತತ್ವ ಪದಗಳು, 7.30 ರಿಂದ 7.45 ರವರೆಗೆ ಹೊಸಪೇಟೆ ಅಮರವಾತಿಯ ಸುಜಾತ ದೇಸಾಯಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 7.45 ರಿಂದ 8 ರವರೆಗೆ ಬೆಂಗಳೂರಿನ ಕುಮಾರಿ ನಿತ್ಯಾ ಪಿ ಮತ್ತು ತಂಡದವರಿಂದ ಭರತನಾಟ್ಯ,

8 ರಿಂದ 8.15 ರವರೆಗೆ ಹೊಸಪೇಟೆ ಚಪ್ಪರದಹಳ್ಳಿಯ ಬಿ. ಸುಬ್ಬರಾಯುಡು ಮತ್ತು ತಂಡದವರಿಂದ ಭಕ್ತಿಗೀತೆಗಳು, 8.45 ರಿಂದ 9 ರವರೆಗೆ ಬಳ್ಳಾರಿ ಬಂಡಿಹಟ್ಟಿಯ ಉದಯ್ ಕುಮಾರ್ ಅವರಿಂದ ಮಕ್ಕಳ ಡೊಳ್ಳು ಕುಣಿತ, 9 ರಿಂದ 9.15 ರವರೆಗೆ ಬೆಂಗಳೂರು ಗೋವಿಂದರಾಜ ನಗರದ ತಾಯಿಬೇರು ದೇಸಿ ಬ್ಯಾಂಡ್ ರವರಿಂದ ಸುಗಮ ಸಂಗೀತ, 9.15 ರಿಂದ 9.30 ರವರೆಗೆ ಹಗರಿಬೊಮ್ಮನಹಳ್ಳಿಯ ಸಂಗೀತ ಹಿರೇಮಠ ರವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 9.30 ರಿಂದ 9.40 ರವರೆಗೆ ಹಡಗಲಿಯ ಚಿಕ್ಕಗೌಡ್ರಕೊಟಗೌಡ್ರ ಉತ್ತಂಗಿ ಯವರಿಂದ ಭಜನೆ, 9.40 ರಿಂದ 9.50 ರವರೆಗೆ ಹೊಸಪೇಟೆಯ ಕಾವ್ಯಾಬಾಯಿ ಮತ್ತು ತಂಡದವರಿಂದ ಸುಗಮ ಸಂಗೀತ, 9.50 ರಿಂದ 10 ರವರೆಗೆ ಹಗರಿಬೊಮ್ಮನಹಳ್ಳಿ ಆನೇಕಲ್ಲು ನ ಎಸ್. ಬಿ ಮಂಜುನಾಥ ಮತ್ತು ತಂಡದವರಿಂದ ಸುಡುಗಾಡು ಸಿದ್ದರ ಕೈಚಳಕ,

10 ರಿಂದ 10.15 ರವರೆಗೆ ಹೊಸಪೇಟೆಯ ಕಮಲಾ ಕುಲಕರ್ಣಿ ಮತ್ತು ತಂಡದವರಿಂದ ಸುಗಮ ಸಂಗೀತ, 10.15 ರಿಂದ 10.30 ರವರೆಗೆ ಎಮ್ಮಿಗನೂರು ಗ್ರಾಮದ ರಾಜು ಮತ್ತು ತಂಡದವರಿಂದ ಚಲನಚಿತ್ರ ಸಂಗೀತ, 10.30 ರಿಂದ 10.45 ರವರೆಗೆ ಕೂಡ್ಲಿಗಿ ಕುರಿಹಟ್ಟಿಯ ಎಚ್ ರಾಜಣ್ಣ ರವರಿಂದ ಜಾನಪದ ಗೀತೆಗಳು ಹಾಗೂ 10.45 ರಿಂದ 11 ರವರೆಗೆ ಹೂವಿನಹಡಗಲಿಯ ಡಾ. ಬಸವರಾಜ ಮಲಶೆಟ್ಟಿಯವರಿಂದ ಬಯಲಾಟ ಪದಗಳು ಕಾರ್ಯಕ್ರಮಗಳು ನೆಡೆಯಲಿವೆ.

## ಸಾಸಿವೆಕಾಳು ಗಣಪ ವೇದಿಕೆ

ಸಂಜೆ 4 ರಿಂದ 4.15 ರವರೆಗೆ ಹೊಸಪೇಟೆಯ ದೇವಿಕಾ ಜೋಗಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನೆಡೆಯಲಿದೆ. 4.15 ರಿಂದ 4.30 ರವರೆಗೆ ಹೊಸಪೇಟೆ ವೆಂಕಾಟಪುರದ ಕುಮಾರಿ ಎಸ್ ಸಾನಿಕ ಮತ್ತು ತಂಡದವರಿಂದ ಭರತನಾಟ್ಯ, 4.30 ರಿಂದ 4.45 ರವರೆಗೆ ಕಲಬುರಗಿಯ ಜಿ ಚಂದ್ರಕಾಂತ್ ಮತ್ತು ತಂಡದವರಿಂದ ಗಜಲ್ ಗಾಯನ, 4.45 ರಿಂದ 5 ರವರೆಗೆ ಸೋವೇನಹಳ್ಳಿಯ ಮೈಲಾರಲಿಂಗೇಶ್ವರ ಸಮೂಹ ನೃತ್ಯ ತಂಡದಿಂದ ಸಮೂಹ ನೃತ್ಯ, 5 ರಿಂದ 5.15 ರವರೆಗೆ ಹಡಗಲಿಯ ಎಚ್.ಕೊಟ್ರಪ್ಪ ಸೋಗಿ ಮತ್ತು ತಂಡದವರಿಂದ ಬಯಲಾಟ ಪದಗಳು, 5.15 ರಿಂದ 5.30 ರವರೆಗೆ ಹೊಸಪೇಟೆ ಎಂ ಜೆ ನಗರದ ಆನಂದನ್ ಅರ್ ಮತ್ತು ತಂಡದವರಿಂದ ಭಾವಗೀತೆಗಳು, 5.30 ರಿಂದ5.45 ರವರೆಗೆ ಹೊಸಪೇಟೆ ಟಿ ಬಿ ಡ್ಯಾಂ ನ ಕುಮಾರಿ ಎನ್ ಕಾವ್ಯ ಮತ್ತು ತಂಡದವರಿಂದ ಭರತನಾಟ್ಯ, 5.45 ರಿಂದ 6 ರವರೆಗೆ ಕೊಟ್ಟೂರು ಸಂಗಮೇಶ್ವರದ ಕುಮಾರಿ ಸವಿತಾ ಕೆ ಮತ್ತು ತಂಡದವರಿಂದ ಜಾನಪದ ಗೀತೆಗಳು, 6. ರಿಂದ 6.15 ರವರೆಗೆ ಹರಪನಹಳ್ಳಿ ಅರಸೀಕೆರಯ ಕೆ.ಬಿ ಅನಿಲ್ ಕುಮಾರ್ ಮತ್ತು ತಂಡದವರಿಂದ ಗೀಗೀ ಪದ, 6.15 ರಿಂದ 6.30 ರವರೆಗೆ ಹೊಸಪೇಟೆ ನಾಗಲಾಪುರದ ಬಿ.ನವೀನ್ ಮತ್ತು ತಂಡದವರಿಂದ ತಬಲಾ ಸೋಲೋ, 6.30 ರಿಂದ 7 ರವರೆಗೆ ಬಳ್ಳಾರಿ ಮಾರುತಿ ತೊಗಲು ಗೊಂಬೆ ಕಲಾ ಟ್ರಸ್ಟ್ ನ ಸುಬ್ಬಣ್ಣರವರಿಂದ ತೊಗಲು ಗೊಂಬೆ ಆಟ, 7 ರಿಂದ 8 ರವರೆಗೆ ಕೊಪ್ಪಳದ ಶಾಂತವೀರ ಶಿಕ್ಷಣ ಗ್ರಾಮಿಣಾಭಿವೃದ್ಧಿ ಸಾಂಸ್ಸ್ರಸತಿಕ ಕಲಾ ಸಂಸ್ಥೆಯಿಂದ ವೀರ ಸಿಂಧೂರ ಲಕ್ಷ್ಮಣ ನಾಟಕ, 8 ರಿಂದ 9 ರವರೆಗೆ ಹಗರಿಬೊಮ್ಮನಹಳ್ಳಿಯ ಬನ್ನಿ ಮಹಾಂಕಾಳಿ ದೇವಿ ಬಯಲಾಟ ಸಂಘ ಕಲಾವಿದರಿಂದ ಬಯಲಾಟ, 9 ರಿಂದ 10 ರವರೆಗೆ ಮರಿಯಮ್ಮನಹಳ್ಳಿಯ ಲಲಿತಕಲಾ ರಂಗದಿಂದ ಬುರ್ಗಲ್ಲು ನಾಟಕ ಹಾಗೂ 10 ರಿಂದ 11 ರವರೆಗೆ ನೃಪತುಂಗಾ ಕಲಾ ಟ್ರಸ್ಟ್ ವತಿಯಿಂದ ನಾರದ ಕಲ್ಯಾಣ ನಾಟಕ ಕಾರ್ಯಕ್ರಮ ನೆಡೆಯಲಿವೆ.